ಕರ್ನಾಟಕ ಸರ್ಕಾರದ ನಡುವಳಿಗಳು

ವಿಷಯ:– ಕರ್ನಾಟಕ ಪರೀಕ್ಷಾ ಘಟಕದಿಂದ ನಡೆಸಲ್ಪಡುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲದ ಮೇಲೆ ಶೇ. 6 ರಷ್ಟು ರಿಯಾಯಿತಿ ನೀಡುವ ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:–

1) ಸರ್ಕಾರದ ಆದೇಶ ಸಂಖ್ಯೆ:ಇಡಿ:197 :ಯೋಯೋಕಾ 2008 ಬೆಂಗಳೂರು, ದಿನಾಂಕ:08–09–2008.
2) ದಿನಾಂಕ: 16.10.2008ರಂದು ಈ ಕಾರ್ಯಕ್ರಮದ ಅನುಷ್ಠಾನದ ಸಂಬಂಧ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇವರ ಅಧ್ಯಕ್ಷತೆ ಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ : –

1) ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಬಡ ಮತ್ತು ಕಡಿಮೆ ಆದಾಯ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳು, ಆರ್ಥಿಕ ಅಸಹಾಯತೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವುದು ದುಸ್ತರವಾಗುತ್ತಿದೆ. ಬ್ಯಾಂಕ್‌ಗಳು ವಿವಿಧ ಯೋಜನೆಯಡಿ ಸಾಲ ಸೌಲಭ್ಯವನ್ನು ನೀಡುತ್ತಿದ್ದರೂ, ವಿದ್ಯಾರ್ಥಿಗಳು/ಪೋಷಕರು ಬ್ಯಾಂಕ್‌ಗಳಿಂದ ಸಾಲವನ್ನು ಪಡೆಯಲು ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೇ, ಬ್ಯಾಂಕ್‌ಗಳು ಶಿಕ್ಷಣ ಸಾಲದ ಮೇಲೆ ಅತಿಯಾಗಿ ಬಡ್ಡಿಯನ್ನು ಎಂದರೆ, ಶೇ. 11 ರಿಂದ 12 ರವರೆಗೆ ವಿಧಿಸುತ್ತಿರುತ್ತಾರೆ. ಆದುದರಿಂದ ಈ ಸಾಲದ ಹೊರೆಯನ್ನು ತಪ್ಪಿಸಲು ಮೇಲೆ ಓದಲಾದ 2008–09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು "ಬಡ ಕುಟುಂಬದ ಹಿನ್ನಲೆಯ ವಿದ್ಯಾರ್ಥಿಗಳು ಉನ್ನತ ವೃತ್ತಿ ಶಿಕ್ಷಣ ಸೌಲಭ್ಯದಿಂದ ವಂಚಿತರಾಗುವುದನ್ನು ತಪ್ಪಿಸಲು ನನ್ನ ಸರ್ಕಾರವು ಯೋಜನೆಯೊಂದನ್ನು ಹಮ್ಮಿಕೊಳ್ಳಲಿದೆ. ಈ ಯೋಜನೆಯನ್ವಯ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಸೇರಲು ಶೇ. 6 ರ ಬಡ್ಡಿ ದರದಲ್ಲಿ ಸಾಲ ಪಡೆಯಲು ಸರ್ಕಾರದಿಂದ ಸಹಾಯಧನ ಒದಗಿಸಲಾಗುವುದು" ಎಂದು ಘೋಷಿಸಿದ್ದರ ಅನ್ವಯ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿವರವಾದ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು.

2) ಮೇಲೆ (2)ರಲ್ಲಿ ಓದಲಾದ ದಿನಾಂಕ : 16.10.2008ರ ಸಭೆಯಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸುವ ಸಂಬಂಧ ಚರ್ಚಿಸಿದ್ದು, ಈ ಅಂಶವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ:197:ಯೋಯೋಕಾ 2008(ಭಾಗ) ಬೆಂಗಳೂರು, ದಿನಾಂಕ:19–11–2008**
**[ಸ್ವೀಮರ:ಇಡಿ: 177 :(ಯುನಿಕ್) 2008, ದಿನಾಂಕ:19–11–2008]**

3) 2008–09ನೇ ಸಾಲಿನಿಂದ ಕರ್ನಾಟಕ ಪರೀಕ್ಷಾ ಘಟಕದಿಂದ ನಡೆಸಲ್ಪಡುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲದ ಮೇಲೆ ಶೇ.6ರಷ್ಟು ರಿಯಾಯಿತಿ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಲುವಾಗಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಮೇಲ್ವಿಚಾರಣೆ ನಡೆಸುವ ನಿರ್ದೇಶಕರು, ತಾಂತ್ರಿಕ

ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನೋಡಲ್ ಏಜನ್ಸಿಯಾಗಿ ನಿಯುಕ್ತಿಗೊಳಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಈ ಮಾರ್ಗಸೂಚಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

**ಎ) ಸಾಲ ಮಂಜೂರಾತಿ ಸಮಯದಲ್ಲಿ:-**

1. ಬ್ಯಾಂಕುಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆಯುವ ಯಾವುದೇ ಅಭ್ಯರ್ಥಿಗೆ ಸಾಲ ಮಂಜೂರಾತಿ ಮಾಡಬಹುದು.

2. ಬಡ್ಡಿ ಸಹಾಯಾನುದಾನದ ಮರುಪಾವತಿಯ ಹಿನ್ನಲೆಯಲ್ಲಿ, ಪ್ರತಿಯೊಂದು ವರ್ಗದ ಬ್ಯಾಂಕ್‌ಗಳು (ಉದಾ: ಎಸ್.ಬಿ.ಎಂ, ಎಸ್.ಬಿ.ಐ, ಕೆನರಾ ಬ್ಯಾಂಕ್ ಇತ್ಯಾದಿಗಳು) ಬೆಂಗಳೂರಿನಲ್ಲಿ ಒಂದು ನಿರ್ದಿಷ್ಟ ಶಾಖೆಯನ್ನು ಗುರುತಿಸಬೇಕು. ಅರ್ಜಿಗಳನ್ನು ಸ್ವೀಕರಿಸಿದ ಪ್ರತಿ ಬ್ಯಾಂಕುಗಳು, ಅರ್ಜಿಗಳನ್ನು ಸೂಕ್ತ ಶಿಫಾರಸಿನೊಂದಿಗೆ ಬೆಂಗಳೂರು ನಗರದಲ್ಲಿರುವ ಪ್ರತಿನಿಧಿ ಶಾಖೆಗೆ ಶೀಘ್ರವಾಗಿ ಕಳುಹಿಸಬೇಕು.

3. ಅರ್ಹ ಅಭ್ಯರ್ಥಿಗಳು ರಾಜ್ಯದಲ್ಲಿನ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳ ನಿಗದಿತ ನಮೂನೆಗಳನ್ನು ಬಳಸಿ ಸಾಲ ಪಡೆಯಬಹುದು.

4. ಪ್ರತಿಯೊಂದು ಅಭ್ಯರ್ಥಿಗೆ ಮಂಜೂರು ಮಾಡಬಹುದಾದ ಸಾಲದ ಮೊತ್ತವು ವಿದ್ಯಾರ್ಥಿಯು ಅಭ್ಯಸಿಸುತ್ತಿರುವ ಕಾಲೇಜಿನ ಪ್ರಿನ್ಸಿಪಾಲರು ಇಡೀ ಕೋರ್ಸಿಗೆ ತಗಲುವ ಒಟ್ಟು ವೆಚ್ಚದ ಬಗ್ಗೆ ನೀಡಿರುವ ಪ್ರಮಾಣ ಪತ್ರದಲ್ಲಿನ ಮೊತ್ತವನ್ನು ಮೀರಬಾರದು ಹಾಗೂ ಈ ಮೊತ್ತವು ಗರಿಷ್ಠ 5.00ಲಕ್ಷರೂಗಳಾಗಿರುತ್ತದೆ. ಈ ವೆಚ್ಚವು ಬೋಧನಾ ಶುಲ್ಕ ಒಳಗೊಂಡಿರುತ್ತದೆ.

5. ಈ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾದ ಶೈಕ್ಷಣಿಕ ಸಾಲಗಳಿಗೆ ಸರ್ಕಾರವು ಬಡ್ಡಿ ಸಹಾಯಾನುದಾನವನ್ನು ನೀಡುವುದು ಮತ್ತು ಅಭ್ಯರ್ಥಿಯು ಆ ಸಾಲದ ಮೇಲೆ ಗರಿಷ್ಟ ಶೇಕಡ 6ರಷ್ಟು ಬಡ್ಡಿ ಮಾತ್ರ ಕೊಡಬೇಕಾಗುವುದು.

**ಬಿ) ಸಹಾಯ ಬಡ್ಡಿ ಧನ ಮರುಪಾವತಿ ಪ್ರಸ್ತಾವನೆಗಳನ್ನು ಸಲ್ಲಿಸುವ ಬಗ್ಗೆ :-**

1. ಬ್ಯಾಂಕುಗಳು ಬಡ್ಡಿ ಸಹಾಯಧನ ಮಂಜೂರಾತಿ ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಅಭ್ಯರ್ಥಿಯು ಹಿಂದಿನ ಸಾಲಿನ ಪರೀಕ್ಷೆಯಲ್ಲಿ ಸಂಪೂರ್ಣ ತೇರ್ಗಡೆ ಅಥವಾ ಮುಂದಿನ ಸಾಲಿನ (ಸೆಮಿಸ್ಟರ್/ವರ್ಷ) ವಿದ್ಯಾಭ್ಯಾಸ ಮುಂದುವರೆಸಲು ಅರ್ಹತೆ ಪಡೆದಿರುವ ಬಗ್ಗೆ ಪರಿಶೀಲನೆ ಮಾಡಿ, ಅಂತಹ ಅಭ್ಯರ್ಥಿಗಳ ಪ್ರಸ್ತಾವನೆಯನ್ನು ಮಾತ್ರ ಸಲ್ಲಿಸತಕ್ಕದ್ದು.

2. ಪ್ರತಿಯೊಂದು ಬ್ಯಾಂಕು ಪ್ರತ್ಯೇಕವಾಗಿ ಬಡ್ಡಿ ಸಹಾಯಧನ ಮರುಪಾವತಿ ಪ್ರಸ್ತಾವನೆಯನ್ನು ಸಲ್ಲಿಸುವ ಬದಲು ಪ್ರತಿಯೊಂದು ವರ್ಗದ ಬ್ಯಾಂಕುಗಳು (ಉದಾ: ಎಸ್.ಬಿ.ಎಂ., ಎಸ್.ಬಿ.ಐ, ಕೆನರಾ ಬ್ಯಾಂಕ್ ಇತ್ಯಾದಿಗಳು) ತನ್ನ ಎಲ್ಲಾ ಶಾಖೆಗಳ ಪ್ರಸ್ತಾವನೆಗಳನ್ನು ಬೆಂಗಳೂರಿನಲ್ಲಿನ ಪ್ರತಿನಿಧಿ ಶಾಖೆಯ ಮೂಲಕ ನೋಡಲ್ ಏಜನ್ಸಿಗೆ ಸಲ್ಲಿಸಬೇಕು. ಇಂತಹ

ಪ್ರಸ್ತಾವನೆಗಳು ಪ್ರತಿಯೊಂದು ಕೋರ್ಸಿಗೆ ಪ್ರತ್ಯೇಕವಾಗಿದ್ದು ಕಾಲೇಜುವಾರು ವಿವರಗಳನ್ನು ಒಳಗೊಂಡಿರಬೇಕು. ಎಲ್ಲಾ ಪ್ರಸ್ತಾವನೆಗಳು ದ್ವಿಪ್ರತಿಯಲ್ಲಿರಬೇಕು.

3. ನೋಡಲ್ ಏಜನ್ಸಿಯು ಬಡ್ಡಿ ಸಹಾಯಧನ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಜೂರಾತಿ ನೀಡಿದ ನಂತರ ಸಹಾಯಧನವನ್ನು ಆಯಾ ವರ್ಗದ ಬ್ಯಾಂಕುಗಳ ಪ್ರತಿನಿಧಿ ಶಾಖೆಗೆ ಒಂದೇ ಚೆಕ್ ಮೂಲಕ ಪಾವತಿಸುವುದು.

4. ಯಾವುದೇ ಅಭ್ಯರ್ಥಿಯು ಅನುತ್ತೀರ್ಣವಾದಲ್ಲಿ, ಅಂದರೆ ಮುಂದಿನ ಸೆಮಿಸ್ಟರ್/ ವರ್ಷಕ್ಕೆ ಹೋಗಲು ಅರ್ಹತೆ ಪಡೆಯದೇ ಇದ್ದ ಪಕ್ಷದಲ್ಲಿ ಈ ಯೋಜನೆಯಡಿ ಬಡ್ಡಿ ಸಹಾಯಧನ ಪಡೆಯಲು ಆ ಸಾಲಿನಿಂದ ಕೋರ್ಸು ಮುಗಿಯುವವರೆಗೂ ಅರ್ಹನಾಗಿರುವುದಿಲ್ಲ. ಆದರೆ ಈಗಾಗಲೇ ಪಡೆದಿರುವ ಶೈಕ್ಷಣಿಕ ಸಾಲದ ಮೇಲೆ ಬಡ್ಡಿ ಸಹಾಯಧನವನ್ನು ಅರ್ಹ ಕೋರ್ಸಿನ ಗರಿಷ್ಠ ಅವಧಿವರೆಗೆ ಪಡೆಯಲು ಅರ್ಹವಾಗಿರುತ್ತದೆ.

5. ಬಡ್ಡಿ ಸಹಾಯಧನವು ಕೇವಲ ಕೋರ್ಸಿನ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. (ಉದಾ : ಇಂಜನೀಯರಿಂಗ್ 4 ವರ್ಷ).

6. ಬಡ್ಡಿ ಸಹಾಯಧನ ಮರುಪಾವತಿಗೆ ಬೇಕಾಗಬಹುದಾದ ಮೊತ್ತವನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಬಿಡುಗಡೆ ಮಾಡತಕ್ಕದ್ದು. ಪರೀಕ್ಷಾ ಪ್ರಾಧಿಕಾರವು ಈ ಮೊತ್ತವನ್ನು ಒಂದು ನಿಗದಿತ ಬ್ಯಾಂಕ್‌ನಲ್ಲಿಟ್ಟುಕೊಂಡು ನೋಡಲ್ ಬ್ಯಾಂಕಗಳು ಕಾಲಕಾಲಕ್ಕೆ ಸಲ್ಲಿಸುವ ಸಹಾಯಧನ ಬೇಡಿಕೆಗೆ ಅನುಗುಣವಾಗಿ ಬಿಡುಗಡೆ ಮಾಡತಕ್ಕದ್ದು.

7. ರಾಜ್ಯಮಟ್ಟದ ಬ್ಯಾಂಕುಗಳ ಸಮಿತಿಯ ಸಂಚಾಲಕರು ಎಲ್ಲಾ ಬ್ಯಾಂಕುಗಳ ಪರವಾಗಿ ಈ ಯೋಜನೆಯ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

4) ಉಳಿದಂತೆ ದಿನಾಂಕ : 18-09-2008ರಲ್ಲಿ ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ ಎಲ್ಲಾ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

[ಎ.ಎಫ್.ಮಾಗಿ]
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ[ಯೋಜನೆ].

ಗೆ:-

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ[1 ಮತ್ತು 2], ಬೆಂಗಳೂರು.